**ಅಸಲು ದಾವಾ ನಂ:22/2019**
**ಡಿ.ಡಬ್ಲ್ಯೂ:02**

**<u>ದಿನಾಂಕಃ 02-09-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು: ಶ್ರೀ ಎಂ.ಎಸ್.ಜೆ., ವಾದಿ ಪರ ವಕೀಲರಿಂದ</u>

ನಾನು 7 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಓದಲು ಬರುವುದಿಲ್ಲ. ನನಗೆ ಈಗ 53 ವರ್ಷ ವಯಸ್ಸಾಗಿರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ವಯಸ್ಸು 70 ವರ್ಷ ಅಂತ ನಮೂದು ಇರುತ್ತದೆ ಎಂದರೆ ಸಾಕ್ಷಿಯು ನನ್ನ ವಯಸ್ಸು 53 ವರ್ಷ ಎಂದು ನುಡಿಯುತ್ತಾರೆ. ಸದರಿ ಮುಖ್ಯ ವಿಚಾರಣೆಯ ಪ್ರಮಾಣಪತ್ರ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸಾಕ್ಷಿಯು ತಪ್ಪಾಗಿ ಬರೆದಿರಬಹುದು ಎಂದು ನುಡಿಯುತ್ತಾರೆ.

ನಾವು 3 ಜನ ಅಣ್ಣ ತಮ್ಮಂದಿರು. ನನಗೆ ಸೇರಿದ 4 ಎಕರೆ ಜಮೀನು ಇರುತ್ತದೆ. ಕೆಂಚವ್ವನಹಳ್ಳಿ ಗ್ರಾಮದ ವ್ಯಾಪ್ತಿಗೆ ಸರ್ವೇ ನಂ.72 ರಲ್ಲಿ 3 ಎಕರೆ ಜಮೀನು ಇರುತ್ತದೆ. ಸದರಿ ಜಮೀನನ್ನು ನಾನು ಕ್ರಯಕ್ಕೆ ಪಡೆದಿರುತ್ತೇನೆ. ಸರ್ವೇ ನಂ.130/4 ರಲ್ಲಿ 4 ಎಕರೆ 20 ಗುಂಟೆ ಜಮೀನನ್ನು ಮಲಕ್ಕರವರು ಈರಮಲ್ಲಪ್ಪರವರಿಂದ ಖರೀದಿಸಿರುತ್ತಾರೆ. ಈರಮಲ್ಲಪ್ಪರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸುಮಾರು 20-30 ವರ್ಷಗಳ ಹಿಂದೆ ಖರೀದಿಸಿರುತ್ತಾರೆ. ಕ್ರಯಪತ್ರದ ಸಮಯದಲ್ಲಿ ನಾನು ಹಾಜರು ಇರಲಿಲ್ಲ. ಸದರಿ ಕ್ರಯಪತ್ರವನ್ನು ಈಗ್ಗೆ 10 ವರ್ಷಗಳ ಹಿಂದೆ ಗ್ರಾಮದಲ್ಲಿ ನಾನು ನೋಡಿರುತ್ತೇನೆ.

1 ನೇ ಪ್ರತಿವಾದಿಯ ಜಮೀನಿನ ಅಕ್ಕಪಕ್ಕ ನನ್ನ ಜಮೀನು ಇರುವುದಿಲ್ಲ. 3 ಕಿ.ಮೀ. ಅಂತರದಲ್ಲಿ ನನ್ನ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಈರಮಲ್ಲಪ್ಪರವರು ನೇರವಾಗಿ 1 ನೇ ಪ್ರತಿವಾದಿಯ ತಾಯಿ ಮಲ್ಲಕ್ಕರವರಿಗೆ ಕ್ರಯಪತ್ರವನ್ನು ಮಾಡಿಸಿಕೊಟ್ಟಿರುತ್ತಾರೆ. ವಾದಿಯ ಗಂಡ ನೇರವಾಗಿ 1 ನೇ ಪ್ರತಿವಾದಿಯ ತಾಯಿಗೆ ಜಮೀನನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಮಲ್ಲಕ್ಕನ ಅಣ್ಣ ಸಣ್ಣಮಲ್ಲಪ್ಪ ಬಿನ್ ಕೋಲಾಡ ಮಲ್ಲಪ್ಪ 4 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದಲ್ಲು 4 ಎಕರೆ ಜಮೀನು ಎಂದು ನಮೂದಿಸಲಾಗಿರುತ್ತದೆ ಎಂದರೆ ಸಾಕ್ಷಿಯು 4 ಎಕರೆ 20 ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ಮಲ್ಲಕ್ಕನ ಹೆಸರಿಗೆ 4 ಎಕರೆ ಮಾತ್ರ ಮ್ಯೂಟೇಶನ್ ಆಗಿರುತ್ತದೆ ಎಂದರೆ ಸರಿಯಲ್ಲ. ಮಲ್ಲಕ್ಕನ ಮರಣಾನಂತರ 1 ನೇ ಪ್ರತಿವಾದಿಗೆ 4 ಎಕರೆ ಮಾತ್ರ ಹಕ್ಕು ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು 4 ಎಕರೆ ಜಮೀನಿನಲ್ಲಿ ಹಕ್ಕು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಾನು ಜಮೀನನ್ನು ನೋಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚಿತ್ತಪ್ಪರವರು ಅಕ್ಕಪಕ್ಕದ ಮನೆಯಲ್ಲಿ ವಾಸಿಸುತ್ತಿದ್ದೇವೆ ಎಂದರೆ ಸರಿಯಲ್ಲ. ನಾವು ಒಂದೇ ಊರಿನವರು ಆಗಿರುವ ಕಾರಣ ವಿಶ್ವಾಸದಿಂದ ಇರುತ್ತೇವೆ ಎಂದರೆ ಸರಿಯಲ್ಲ. ನಾನು ಕ್ರಯಪತ್ರವನ್ನು ನೋಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.